# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಅಭಿಯಂತರರ ಕಛೇರಿ, ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ, ಬೆಂಗಳೂರು

ಸಂ: ಸ.ಅ/ವಾ-161/2021-22

ದಿನಾಂಕ : 01/01/2022

## ವಾರ್ಡ್ ಸಮಿತಿಯ ಸಭೆಯ ನಡವಳಿಗಳು

**ವಿಷಯ:-** ಮಾನ್ಯ ಆಯುಕ್ತರು ಬಿ.ಬಿ.ಎಂ.ಪಿ ರವರ ಆದೇಶ ಸಂಖ್ಯೆ :ಬಿ12(58)ಪಿಆರ್/35/2020-21 ದಿನಾಕ :21-09-2020 ರವರ ಆದೇಶದಂತೆ ದಿನಾಂಕ :01-01-2022 ರಂದು ವಾರ್ಡ್ ಸಂಖ್ಯೆ-161 ಹೊಸಕೆರೆಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮತಿ ಸಭೆಯ ನಡವಳಿಗಳು.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ್ ಕಮಿಟಿ ಸಭೆ ನಿಗಧಿಪಡಿಸಿ ದಿನಾಂಕ :01-01-2022 ರಂದು ವಾರ್ಡ್ ಕಛೇರಿಯಲ್ಲಿ ಬೆಳಿಗ್ಗೆ 11.30 ಗಂಟೆಗೆ ಶ್ರೀ ಧರಣೇಂದ್ರಕುಮಾರ್ ನೋಡೆಲ್ ಅಧಿಕಾರಿಗಳು ರವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ವೆಂಕಟಮಲವಯ್ಯ.ಕೆ ಸದಸ್ಯ ಕಾರ್ಯದರ್ಶಿ ರವರ ಕಾರ್ಯಾದ್ಯಕ್ಷತೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು.

ಸಭೆಯಲ್ಲಿ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಎಲ್ಲಾ ಇಲಾಖೆಯ ಅಧಿಕಾರಿ ವರ್ಗದವರು ಹಾಜರಿರುತ್ತಾರೆ.

ಹಿಂದಿನ ವಾರ್ಡ್ ಸಭೆಯ ನಡವಳಿಗಳನ್ನು ಚರ್ಚಿಸಲಾಗಿರುತ್ತದೆ.

1) ಬೆಂಗಳೂರು ಜಲಮಂಡಳಿಯಿಂದ ಸ್ಯಾನಿಟರಿ ಮ್ಯಾನ್‌ಹೋಲ್‌ಗಳನ್ನು ದುರಸ್ಥಿ ಮಾಡಿ ಮ್ಯಾನ್‌ಹೋಲ್‌ನಲ್ಲಿ ಇರುವ ಮಣ್ಣನ್ನು ತುರ್ತಾಗಿ ತೆರವುಗೊಳಿಸಲು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.
2) ಆಂಜನೇಯನಗರದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯ ಕಛೇರಿ ಎದುರು ರಸ್ತೆ ಹಂಪ್ಸ್‌ಗಳನ್ನು ಅಳವಡಿಸಲು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.
3) ಆಂಜನೇಯನಗರದಲ್ಲಿ ಸ್ಯಾನಿಟರಿ ಪೈಪ್‌ಲೈನ್ ಬದಲಾಯಿಸಲು ಸಭೆಯಲ್ಲಿ ಚರ್ಚಿಸಲಾಗಿರುತ್ತದೆ.
4) ಮತದಾರರ ಪಟ್ಟಿಯಲ್ಲಿ ಮರಣ ಹೊಂದಿರುವ ಮತ್ತು ವಾಸ ಸ್ಥಳದಲ್ಲಿ ಇಲ್ಲದಿರುವವರ ಹೆಸರುಗಳನ್ನು ತೆಗೆಯಲು ಮತ್ತು ಹೊಸದಾಗಿ ಸೇರಿಸಲು ಕ್ರಮ ಜರುಗಿಸಲು ಸಭೆಯಲ್ಲಿ ಸೂಚಿಸಲಾಗಿರುತ್ತದೆ.

ಮಾನ್ಯ ಆಯುಕ್ತರವರ ಸೂಚನೆಯಂತೆ ಪ್ರತಿ ಒಂದನೇ ಹಾಗೂ ಮೂರನೇ ಶನಿವಾರದಂದು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಲು ಹಾಗೂ ವಾರ್ಡ್‌ಗೆ ಸಂಬಂಧಿಸಿದ ಎಲ್ಲಾ ವಿಭಾಗದ ಅಧಿಕಾರಿಗಳು ಸಭೆಯಲ್ಲಿ ಹಾಜರಿರಲು ಕೋರುತ್ತಾ ಮತ್ತು ಮುಂದಿನ ಸಭೆಯಲ್ಲಿ ರೆಸಿಡೆಂಟ್ಸ್ ವೆಲ್‌ಫೇರ್ ಅಸೋಸಿಯೇಶನ್ ರವರನ್ನು ಹೆಚ್ಚಿನ ಸಂಖ್ಯೆಯಲ್ಲಿ ಆಹ್ವಾನಿಸಲು ಸಂಚಾಲಕರಿಗೆ ಸೂಚಿಸಿ ಸಭೆಯಲ್ಲಿ ಯಾವುದೇ ಪ್ರಸ್ತಾವನೆ ಮಾಡದಿದ್ದ ಕಾರಣ ನೋಡಲ್ ಅಧಿಕಾರಿ/ಅಧ್ಯಕ್ಷರ ಅಪ್ಪಣೆ ಮೇರೆಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ಸಂಚಾಲಕರು

ವಾರ್ಡ್ 161 ರ ನೋಡಲ್ ಅಧಿಕಾರಿ.